

ಮದುವೆ ಆಗಿದ್ಲಂತೆ. ಕೆಲಸಕ್ಕೆ ರಾಜೀನಾಮೆ ಕೊಟ್ಟ ಮೇಲೆ ಒಂದು ತಿಂಗಳು ನಂಜೊತೆ ಮಾತು ಬಿಟ್ಟಿದ್ದಳು.'

'ದುಡ್ಡನ್ನು ಯಾರಾದ್ರೂ ಸಂಪಾದಿಸ್ತಾರೆ, ಐಎಎಸ್ ಆಫೀಸರ್ ಅನ್ನಿಸಿಕೊಳ್ಳೋ ಗೌರವ ಎಷ್ಟು ಜನಕ್ಕೆ ಇರುತ್ತೆ? ಇನ್ನು ಹತ್ತದಿನ್ನೈದು ವರ್ಷ ಕಳೆದಿದ್ರೆ, ಚೀಫ್ ಸೆಕ್ರೆಟರಿ ಆಗ್ತಿದ್ರಿ. ರೆಸಿಗ್ನೇಷನ್ ಹಿಂದಕ್ಕೆ ತಗಳ್ಳಿ. ನಾನು ರೀಇನ್‌ಸ್ಟೇಟ್ ಮಾಡಿಸ್ತೀನಿ... ಅಂತ ಮಾವ ಒತ್ತಾಯ ಮಾಡಿದರು. ನಾನು ರೆವಿನ್ಯೂ ಸೆಕ್ರೆಟರಿ ಆಗಬೇಕು ಅಂತ ಇಷ್ಟಪಟ್ಟಿದ್ರಂತೆ. ಅವರ ಅಜೆಂಡಾ ಏನಿತ್ತೋ?.'

ಇದನ್ನೆಲ್ಲ ತನಗೆ ಯಾಕೆ ಹೇಳ್ತಿದ್ದಾನೆ ಅಂತ ಅಶ್ವಿನಿ ಯೋಚಿಸಿದಳು. ಅವನು ಮಾತಾಡುವಾಗ ಮುಖದಲ್ಲಾದ ಬದಲಾವಣೆಗಳನ್ನು ಗುರುತಿಸಲು ಅವಳಿಗೆ ಆಗಲಿಲ್ಲ. ಹಿಂದಿನ ಸೀಟಿನಲ್ಲಿದ್ದಳು. ಅವನು ರಸ್ತೆ ನೋಡಿಕೊಂಡು ಡ್ರೈವ್ ಮಾಡ್ತಿದ್ದ. ಹಿಲ್ಸ್‌ನ ಎಂಟರೆನ್ಸ್ ಆರ್ಚ್ ಹತ್ತಿರ ಕಾರು ನಿಲ್ಲಿಸಿದ. ಇಳಿಯುವಾಗ ಮತ್ತೆ ಸಾರಿ ಅಂದ. ಆಮೇಲೆ ಏನೂ ಹೇಳದೆ ಹೋಗಿಬಿಟ್ಟ.

ಶರತ್ ಹೇಳಿದ್ದು ನಿಜವಿರಬಹುದೇ? ಅಶ್ವಿನಿ ಕಾಲೇಜಿನಲ್ಲಿ ಕೆಲಸ ಮಾಡುವಾಗ ಅವಳ ಕಲೀಗೊಬ್ಬ ಹೀಗೇ ತನ್ನ ಹೆಂಡ್ತಿ ಬಗ್ಗೆ ಆಗಾಗ ಗೊಣಗ್ತಿದ್ದ. ನನ್ನ ಹೆಂಡ್ತಿಗೆ ಕನ್ನಡವೇ ಸರಿಯಾಗಿ ಬರಲ್ಲ. ಹೋತದೆ, ಬತ್ತದೆ ಅಂತ ಮಾತಾಡೊ ಹಳ್ಳಿ ಹೆಂಗಸು, ಜತೆಗೆ ರೋಗಿಷ್ಟೆ. ಮೂರು ಹೊತ್ತೂ ಮಲಗಿರ್ತಾಳೆ. ಸರಿಯಾಗಿ ಅಡುಗೆಯನ್ನೂ ಮಾಡಲ್ಲ. ಏನಾದರೂ